# ಗುಣವಾಯಿತೆನ್ನ ಭವರೋಗ..

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 217.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 329.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics in the above books are same and the singer has followed these lyrics.

ರಾಗ: ಹಿಂದೂಸ್ತಾನಿ ಕಾಪಿ ತಾಳ: ಆದಿ

ಗುಣವಾಯಿತೆನ್ನ ಭವರೋಗ
ಕೃಷ್ಣನೆಂಬ ವೈದ್ಯನು ದೊರಕಿದನು
ಗುಣವಾಗುವವರಿಗೆ ಎಣೆಯಿಲ್ಲ
ಗುಣವಂತರಾಗುವರು ಭವದೆಲ್ಲ || ಪ ||

ಸಂತತ ಹರಿಭಕ್ತಿಯನುಪಾನ
ಸಂತತ ಗುರುಭಕ್ತಿ ಮರುಪಾನ
ಸಂತತ ಶ್ರವಣ ಕಠಿನ ಪಥ್ಯ
ಸಂತತ ಕೀರ್ತನ ಉಷ್ಣೋದಕ || 1 ||

ಚಂದ್ರೋದಯ ಉಂಟು ಈತನಲ್ಲಿ
ಚಿಂತಾಮಣಿಯುಂಟು ಈತನಲ್ಲಿ
ಸಂಚಿಯೊಳಗೆ ತುಂಬ ಮಾತ್ರೆಗಳುಂಟು
ಚೆನ್ನಾಗಿ ಗುಣ ಮಾಡುವನೀತ || 2 ||

ಗುರು ಸ್ಮರಣೆಯು ಶುಂಠಿ ಮೆಣಸು
ಹರಿ ದಿವ್ಯ ನಾಮವು ಸಾರನ್ನ

ಗುರುಪಾದ ಸೇವೆಯು ಸಿಹಿ ಸಾರು
ಹರಿ ಪಾದೋದಕವೆ ಘೃತವು || 3 ||

ಸಹಸ್ರ ನಾಮದಿ ತಾ ವಂದ್ಯ
ಸಕಲ ಸ್ವತಂತ್ರಕೆ ತಾ ಬಾಧ್ಯ
ಹರಿ ಸರ್ವೋತ್ತಮನೆಂಬ ವೈದ್ಯ
ಪುರಂದರ ವಿಠಲನೆ ನಿರವದ್ಯ || 4 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಂಸಾರವೆಂಬುದೇ ಒಂದು ರೋಗ. ಅದನ್ನು ಪರಿಹರಿಸಿಕೊಳ್ಳಲು ಅದರ ನಿಯಾಮಕನಾದ ಪರಮಾತ್ಮನನ್ನೇ ಮೊರೆಹೋಗಬೇಕು. ಭಕ್ತನಾದವನಿಗೆ ಈ ರೋಗಗುಣವಾದಂತೆ.

**Classification:** Keerthane
**Ankita:** purandara vittala
**Location:** NA
**Category:** Binnaha
**Sub-Category:** guna, bhava, roga, Vaidya, Krishna, bhakti, Chandra, niru, smarane, divya, tuppa, harisarvottama,
**Pravachana:** NA
**Explanation:** NA